

بسم اللهِ الرّحمٰنِ الرّحيم

# ಘಾನ ದೇಶದ ಅಮೀರ್ ಸಾಹೇಬ್ ಮೌಲವಿ ಅಬ್ದುಲ್ ವಹ್ಹಾಬ್ ಆದಮ್‌ರವರ ಅನುಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **27-06-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಹ್‌ದೀ ಮಸೀಹ್ ಎಂದು ವಾದಿಸುವ ಮೊದಲೇ ಅವರಿಗೆ ಅನೇಕ ಸಲ ಅಲ್ಲಾಹನು **"ಯನ್‌ಸುರುಕ ರಿಜಾಲುನ್ ನೂಹೀ ಇಲ್ಯೆಹಿ ಮಿನಸ್ಸಮಾಇ"-** (ನಾವು ಆಕಾಶದಿಂದ ಸಂದೇಶವಾಣಿ ಮೂಲಕ ಪ್ರೇರೇಪಿಸುವ ಜನರು ನಿನಗೆ ಸಹಾಯ ನೀಡುವರು) ಎಂದು ದಿವ್ಯ ಸಂದೇಶ ಅವತೀರ್ಣಗೊಳಿಸಿದ್ದನು. ಅನಂತರ 1907ರಲ್ಲಿ ಅದರೊಂದಿಗೆ ಹೀಗೆ ಸಹ ತಿಳಿಸಲಾಯಿತು. **"ಯಅತೂನ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್"-** (ನಿನ್ನ ಕಡೆಗೆ ಪ್ರತಿಯೊಂದು ದೂರದ ದಾರಿಗಳಿಂದ ಜನರು ಆಗಮಿಸುವರು.)

ಈ ಭವಿಷ್ಯವಾಣಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತದ ಕಾಲದಲ್ಲಿ ಅತಿ ಭವ್ಯವಾಗಿ ಈಡೇರಿತು. ಅನಂತರ ಅವರ ಮೂಲಕ ಸ್ಥಾಪಿತವಾದ ಖಿಲಾಫತ್‌ನ ಕಾಲದಲ್ಲಿ ಸಹ ಈ ಭವಿಷ್ಯವಾಣಿಗಳು ಈಡೇರುತ್ತಿವೆ. ಈ ಜನರು ಜಮಾಅತ್ ಬಗ್ಗೆ ಆಸಕ್ತರಾಗುವವರು ಮಾತ್ರವಲ್ಲ ಜಮಾಅತಿಗೋಸ್ಕರ ತಮ್ಮನ್ನು ಅರ್ಪಿಸುವವರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ಅವರ ಖಲೀಫರಿಗೂ ಅತ್ಯುತ್ತಮವಾಗಿ ಸಹಾಯ ಮಾಡುವವರೂ ಆದರು.

ಕೆಲವು ಜನರು ಎಷ್ಟು ದೂರ ದೇಶಗಳಿಂದ ಆಗಮಿಸಿದರೆಂದರೆ 1960 ಮತ್ತು 1970ರ ದಶಕಗಳಲ್ಲಿ ಅವರ ಸ್ವಂತ ದೇಶಗಳಿಗೆ ಪತ್ರ ತಲಪಲು ಆರು ತಿಂಗಳು ಬೇಕಾಗುತ್ತಿತ್ತು. ಹೀಗಿದ್ದರೂ ಆ ಜನರು ದೃಢ ಚಿತ್ತತೆಯಿಂದ ಆಗಮಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ ಜಮಾಅತಿಗೆ ತಮ್ಮನ್ನು ಅರ್ಪಿಸಿಕೊಳ್ಳಲು ಮುಂದಾದರು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಅಹ್ಮದಿಯಾ ಖಿಲಾಫತ್ತಿನ ಸತ್ಯತೆಗೆ ಸಾಕ್ಷ್ಯವಾಗಿದೆ. ಅಂತಹ ವ್ಯಕ್ತಿಗಳು ದೇವಭಕ್ತರಾಗಿದ್ದು ಅಲ್ಲಾಹನ ಅನುಗ್ರಹಗಳನ್ನು ಗಳಿಸಿದವರಾಗಿದ್ದಾರೆ. ಅವರು ಪ್ರಕಾಶಮಾನವಾದ ನಕ್ಷತ್ರಗಳ ಹಾಗೆ ಹೊಳೆಯುತ್ತಿದ್ದಾರೆ. ಅಂತಹ ಜನರಲ್ಲಿ ಅಬ್ದುಲ್ ವಹ್ಹಾಬ್ ಆದಮ್ ಸಾಹೇಬರು ಒಬ್ಬರಾಗಿದ್ದಾರೆ. ಅವರು ಮೇಲೆ ವಿವರಿಸಿದಂತಹ ಕಾಲಘಟ್ಟದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಗಳಿಸಲಿಕ್ಕಾಗಿ ರಬ್ವಕ್ಕೆ ಆಗಮಿಸಿದರು, ಹಾಗೂ ಅವರು ಖಲೀಫರಿಗೆ ಓರ್ವ ಅತ್ಯುತ್ತಮ ಸಹಾಯಕರಾದರು. ಅವರು ಆಗಮಿಸಿದ ಕಾಲದಲ್ಲಿ ರಬ್ವ ನಿರ್ಮಾಣದ ಹಂತದಲ್ಲಿತ್ತು ಮತ್ತು ಅವರ ದೇಶವಾದ ಆಫ್ರಿಕದೊಂದಿಗೆ ಸಂಪರ್ಕ ಸ್ಥಾಪಿಸಲು ತುಂಬಾ ಸಮಯ ಬೇಕಾಗುತ್ತಿತ್ತು. ಅವರು ಖಲೀಫರ ಪ್ರತಿಯೊಂದು ಸೂಚನೆಯನ್ನು ಪಾಲಿಸಿದರು. ಖಲೀಫರ ತೀರ್ಮಾನಗಳು– ಅದು ಚಿಕ್ಕದಾಗಲೀ ದೊಡ್ಡದಾಗಲೀ– ಅವುಗಳನ್ನು ಶಿರಸಾ ವಹಿಸಿಕೊಂಡು ಅದರಂತೆ ನಡೆಯುತ್ತಿದ್ದರು. ಅವರೊಂದಿಗೆ ಘಾನದಲ್ಲಿ ಎಂಟು ವರ್ಷಗಳ ಕಾಲ ಕೆಲಸ ಮಾಡುವ ಸಂದರ್ಭ ನನಗೂ ಲಭಿಸಿತ್ತು. ಆದುದರಿಂದ ಅವರ ಗುಣನಡತೆಗಳ ಬಗ್ಗೆ ನಾನೂ ಸ್ವತಃ ಸಾಕ್ಷಿಯಾಗಿರುವೆನು. ಅಲ್ಲದೆ ನಾನು ಖಲೀಫ ಆದ ಬಳಿಕವೂ ಖಿಲಾಫತ್‌ನೊಂದಿಗೆ ಅವರ ವಿಧೇಯತೆ ಅದೇರೀತಿ ಇತ್ತು.

**ವಹ್ಹಾಬ್ ಆದಮ್ ಸಾಹೇಬರು ಇತ್ತೀಚೆಗೆ ನಿಧನ ಹೊಂದಿದರು**. ಅವರು ಕಳೆದ ಒಂದು ವರ್ಷದಿಂದ ಲಂಡನ್‌ನಲ್ಲಿದ್ದರು. ಈ ವರ್ಷ ಫೆಬ್ರವರಿ ತಿಂಗಳ ಕೊನೆಗೆ ಘಾನಕ್ಕೆ ಮರಳಿ ಹೋದರು. ಅವರು ಐವತ್ತು ವರ್ಷಗಳಿಗಿಂತ ಹೆಚ್ಚು ಕಾಲ ಜಮಾಅತ್‌ಗೆ ಸೇವೆ ಸಲ್ಲಿಸಿದವರಾಗಿದ್ದಾರೆ. **ಅವರ ವ್ಯಕ್ತಿತ್ವದ ಬಗ್ಗೆ ಒಂದು ಭಾಷಣದಲ್ಲಿ ಪೂರ್ಣ ವಿವರಣೆ ನೀಡಲು ಸಾಧ್ಯವಿಲ್ಲ**. ಕೆಲವು ವಿಷಯಗಳನ್ನು ಮಾತ್ರ ನಾನು ಈಗ ಪ್ರಸ್ತಾಪಿಸುವೆನು.

ವಹ್ಹಾಬ್ ಸಾಹೇಬರ ತಂದೆ ತಾಯಂದಿರು ಅಹ್ಮದಿಯರಾಗಿದ್ದರು. ಅವರ ತಂದೆಯವರು ಮೃತರಾದನಂತರ ಅವರ ತಾಯಿ ತನ್ನ ಪತಿಯ ಆಶೆಯ ಪ್ರಕಾರ ವಹ್ಹಾಬ್ ಸಾಹೇಬರನ್ನು ರಬ್ವಕ್ಕೆ ಕಳುಹಿಸಿದರು. 1938ರಲ್ಲಿ ಘಾನದಲ್ಲಿ ಜನಿಸಿದ ಅವರನ್ನು 1952ರಲ್ಲಿ ರಬ್ವಕ್ಕೆ ಕಳುಹಿಸಲಾಗಿತ್ತು. 1960ರಲ್ಲಿ ಅವರು **'ಶಾಹಿದ್'** ಬಿರುದು ಪಡೆದರು. 1969ರ ತನಕ ಅವರು ಮುಬಲ್ಲಿಗರಾಗಿದ್ದರು. ಅನಂತರ ಅವರು **ಘಾನದ ಜಾಮಿಅದ ಪ್ರಿನ್ಸ್‌ಪಾಲರಾದರು**. 1971ರಲ್ಲಿ ಅವರನ್ನು ಲಂಡನಿನ ಫಝ್ಲ್ ಮಸ್‌ಜಿದ್‌ನ **ನಾಯಿಬ್ ಇಮಾಮರನ್ನಾಗಿ** ನೇಮಿಸಲಾಯಿತು. ನಂತರ 1975ರಲ್ಲಿ ಅವರನ್ನು **ಘಾನದ ಅಮೀರ್ ಮತ್ತು ಮುಬಲ್ಲಿಗ್ ಇನ್‌ಚಾರ್ಜ್** ಆಗಿ ನೇಮಿಸಲಾಯಿತು. ಈ ಹುದ್ದೆಯಲ್ಲಿ ಅವರು 39 ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ಬಾಲಕನಾಗಿದ್ದ ವಹ್ಹಾಬ್ ಸಾಹೇಬರೊಂದಿಗೆ ಸಾಲಿಹ್ ಎಂಬ ಇನ್ನೊಬ್ಬ ಬಾಲಕ ರಬ್ವಕ್ಕೆ ವ್ಯಾಸಂಗಕ್ಕೆ ಆಗಮಿಸಿದ್ದರು. 1957ರಲ್ಲಿ ಸಾಲಿಹ್ ರೋಗಿಯಾಗಿದ್ದಾಗ ಅವರ ಊರಿಗೆ ಕಳುಹಿಸಲಾಗಿತ್ತು. ಅವರು 1958ರಲ್ಲಿ 19ನೆ ವಯಸ್ಸಿನಲ್ಲಿ ಮೃತರಾದರು. ವಹ್ಹಾಬ್ ಸಾಹೇಬರು ರಬ್ವದಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಓರ್ವ ಮುಬಲ್ಲಿಗರಾಗಿ ಸ್ವದೇಶಕ್ಕೆ ಹಿಂದಿರುಗಿದರು. **ಅವರನ್ನು ಕಂಡು ಘಾನದ ಯುವ ಜನರು ಮುಬಲ್ಲಿಗರಾಗಲು ಉತ್ಸುಕರಾದುದರಿಂದ ಅಲ್ಲಿ ಒಂದು ಜಾಮಿಅ ಸ್ಥಾಪಿಸಲಾಯಿತು**. ಆ ಜಾಮಿಅದಲ್ಲಿ ಈಗ ವಿವಿಧ ಆಫ್ರಿಕನ್ ದೇಶಗಳ ಅಹ್ಮದಿ ವಿದ್ಯಾರ್ಥಿಗಳು ಶಾಹಿದ್ ಬಿರುದಿಗೋಸ್ಕರ ಕಲಿಯುತ್ತಿದ್ದಾರೆ.

ವಹ್ಹಾಬ್ ಸಾಹೇಬರು ಹೇಳುತ್ತಿದ್ದರು– ಅವರು ಕಲಿಯುತ್ತಿದ್ದ ಕಾಲದಲ್ಲಿ ರಬ್ವದಲ್ಲಿ ವಿದ್ಯುಚ್ಛಕ್ತಿ ಇರಲಿಲ್ಲ. ಕುಡಿಯುವ ನೀರು ಹೊರಗಿನಿಂದ ತರಬೇಕಾಗುತ್ತಿತ್ತು. ಹಾಸ್ಟೆಲ್ ಕಟ್ಟಡದ ಛಾವಣಿ ಮಳೆ ಬರುವಾಗ ಸೋರುತ್ತಿತ್ತು– ಎಂದು. ವಹ್ಹಾಬ್ ಸಾಹೇಬರು

ತಮಾಷೆಗಾಗಿ ಹೀಗೆ ಹೇಳುತ್ತಿದ್ದರು:- ಜೋರಾಗಿ ಮಳೆ ಬಂದಾಗ ನೀರು ಸೋರಿ ನಮ್ಮ ಸೂಟ್‌ಕೇಸ್‌ಗಳು ನೀರಿನಲ್ಲಿ ತೇಲುತ್ತಿದ್ದುವು. ಅವರು ಒಂದು ಸಂಭವ ಈರೀತಿ ವಿವರಿಸುತ್ತಾರೆ: ಅವರಿಗೆ ತರ್ಕಶಾಸ್ತ್ರ ಮತ್ತು ನ್ಯಾಯಶಾಸ್ತ್ರ ಉರ್ದು ಭಾಷೆಯಲ್ಲಿ ಕಲಿಯುವುದು ಬಹಳ ಕಷ್ಟವಾಗುತ್ತಿತ್ತು. ಒಮ್ಮೆ ಪರೀಕ್ಷೆ ಹತ್ತಿರ ಬಂದಾಗ ಅವರು ಆತಂಕಗೊಂಡು ತನ್ನ ಒಬ್ಬ ಸ್ನೇಹಿತನ ಜೊತೆಗೆ **ಹಝ್ರತ್ ಗುಲಾಮ್ ರಸೂಲ್ ರಾಜಿಕೀ ಸಾಹೇಬರನ್ನು** ಕಂಡು ತಮಗೋಸ್ಕರ ಪ್ರಾರ್ಥಿಸಲು ಹೇಳಿದರು. ಮೌಲಾನ ರಾಜಿಕೀ ಸಾಹೇಬರು ದುಆ ಮಾಡಲು ಕೈ ಎತ್ತಿ ವಹ್ಹಾಬ್ ಸಾಹೇಬರನ್ನೂ ಅವರ ಸ್ನೇಹಿತರನ್ನೂ ದುಆ ಮಾಡಲು ತನ್ನೊಂದಿಗೆ ಸೇರಲು ಹೇಳಿದರು. ದುಆದ ನಂತರ ಮೌಲಾನ ಸಾಹೇಬರು ಹೇಳಿದರು: **"ಈಗ ನಾನು ದುಆ ಮಾಡುತ್ತಿದ್ದಾಗ ಒಂದು ದಿವ್ಯ ದರ್ಶನ ಕಂಡೆನು. ಅದರಲ್ಲಿ ನಿಮ್ಮಿಬ್ಬರ ತಲೆಯ ಮೇಲೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೈ ಇರಿಸಿದುದಾಗಿ ಕಂಡೆನು"** ಎಂದು. ಅವರಿಬ್ಬರೂ ಹಝ್ರತ್ **ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಶೀರ್ವಾದಗಳ ಮೂಲಕ ಜಯಶಾಲಿಗಳಾಗುವರು ಎಂದು ಅವರು ಅದಕ್ಕೆ ವ್ಯಾಖ್ಯಾನ ನೀಡಿದರು**. ಅದ್ಭುತಕರವಾಗಿ ವಹ್ಹಾಬ್ ಸಾಹೇಬರು ಆ ವರ್ಷ ಪರೀಕ್ಷೆಯಲ್ಲಿ ತನ್ನ ಕ್ಲಾಸಿನಲ್ಲಿ ಪ್ರಥಮ ಸ್ಥಾನ ಗಳಿಸಿದರು.

ವಹ್ಹಾಬ್ ಸಾಹೇಬರು **ಪ್ರಥಮ ಆಫ್ರಿಕನ್ ಮುಬಲ್ಲಿಗ್** ಆಗಿದ್ದರು. ಅವರು ಘಾನದ ಪ್ರಥಮ **ಅಮೀರ್ ಮತ್ತು ಮಿಶನರಿ ಇನ್‌ಚಾರ್ಜ್** ಆಗಿದ್ದರು. ಅವರು ಒಮ್ಮೆ ಖಲೀಫರ ಅನುಪಸ್ಥಿತಿಯಲ್ಲಿ ಖಲೀಫರ ಪ್ರತಿನಿಧಿಯಾಗಿ ರಬ್ವದ ಪ್ರಥಮ ಆಫ್ರಿಕನ್ '**ಅಮೀರ್ ಮಖಾಮೀ**' ಆಗಿದ್ದರು. ಯುರೋಪಿನಲ್ಲಿ ಕೇಂದ್ರದ ಪ್ರಥಮ ಆಫ್ರಿಕನ್ ಮುಬಲ್ಲಿಗ್ ಅವರಾಗಿದ್ದರು. ಅವರು ಕೇಂದ್ರದ ಪ್ರತಿನಿಧಿಯಾಗಿ ಕೆನಡ, ಜರ್ಮನಿ, ಬೆನಿನ್, ಮಾಲಿ, ಐವರಿಕೋಸ್ಟ್, ನೈಜೀರಿಯಾ, ಬುರ್ಕಿನೋ ಫಾಸೋ, ಲೈಬೀರಿಯಾ, ಸಿರಾ ಲಿಯೋನ್ ಮತ್ತು ಜಮೈಕ ಇತ್ಯಾದಿ ದೇಶಗಳಿಗೆ ಸಂದರ್ಶನ ನೀಡಿದ್ದರು.

**ಅವರು ತಮ್ಮ ತಾಯಿಯ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಬಡವರಿಗೆ ಸಹಾಯ ಮಾಡುತ್ತಿದ್ದರು.** ಅವರು ಅಮೀರ್ ಆಗಿದ್ದ ಕಾಲದಲ್ಲಿ ಘಾನದ ಜಮಾಅತ್ ಬೃಹತ್ತಾಗಿ ಅಭಿವೃದ್ಧಿಗೊಂಡಿದೆ. ಘಾನದಲ್ಲಿ **ನಾಲ್ಕುನೂರು ಶಾಲೆಗಳನ್ನೂ ಏಳು ದೊಡ್ಡ ಆಸ್ಪತ್ರೆಗಳನ್ನೂ ಎರಡು ಹೋಮಿಯೋಪತಿ ಚಿಕಿತ್ಸಾಲಯಗಳನ್ನೂ** ಘಾನದ ಜಮಾಅತ್ ನಡೆಸುತ್ತಿದೆ. ಘಾನದ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೃಹತ್ತಾದ ಚಿತ್ರದೊಂದಿಗೆ **"ವಾಗ್ದತ್ತ ಮಸೀಹಾ ಆಗಮಿಸಿರುವರು"** ಎಂದು ಫಲಕಗಳನ್ನು ವಹ್ಹಾಬ್ ಸಾಹೇಬರು ಇರಿಸಿರುವರು.

ಶಾಂತಿ ಸ್ಥಾಪನೆಗಾಗಿ ವಹ್ಹಾಬ್ ಸಾಹೇಬರು ನಡೆಸಿದ ಪ್ರಯತ್ನಗಳನ್ನು ಮಾನ್ಯ ಮಾಡಿಕೊಂಡು ಇಂಟರ್‌ರಿಲೀಜಿಯನ್ಸ್ ಮತ್ತು ಇಂಟರ್‌ನೇಶನಲ್ ಫೆಡರೇಶನ್ ಅವರಿಗೆ **"ಅಂಬಾಸಡರ್ ಆಫ್ ಪೀಸ್"** ಎಂಬ ಪ್ರಶಸ್ತಿಯನ್ನು ನೀಡಿ ಆದರಿಸಿದೆ. ಘಾನದ ಸರಕಾರ ಸಹ ಅವರಿಗೆ **ವಿದ್ಯಾಭ್ಯಾಸದಲ್ಲಿ ಸಾಧಿಸಿದ ಪ್ರಗತಿಗಾಗಿ ಪ್ರಶಸ್ತಿಗಳನ್ನು** ನೀಡಿ ಗೌರವಿಸಿದೆ. ಘಾನದ ಯುನಿವರ್ಸಿಟಿ ಆಫ್ ಕೇಪ್ ಕೋಸ್ಟ್ 2007ರಲ್ಲಿ ಅವರಿಗೆ ಗೌರವದ **ಪಿ.ಎಚ್.ಡಿ. ಡಿಗ್ರಿ** ನೀಡಿ ಆದರಿಸಿದೆ.

ಅವರು ಘಾನದ **ಸೆಂಟರ್ ಫೋರ್ ಡೆಮೋಕ್ರಟಿಕ್ ಡೆವಲಪ್‌ಮೆಂಟ್** ಇದರ ಸದಸ್ಯರಾಗಿದ್ದರು. ಅವರು ಘಾನದ **ಇಂಟಗ್ರಿಟಿ ಇನಿಶಿಯೇಟಿವ್‌ನ ವೈಸ್ ಚೇರ್‌ಮ್ಯಾನ್** ಆಗಿದ್ದರು. ಅವರು **ನ್ಯಾಶನಲ್ ಪೀಸ್ ಕೌನ್ಸಿಲ್** ಸದಸ್ಯರಾಗಿದ್ದರು. ಅವರು **ಕೌನ್ಸಿಲ್ ಫಾರ್ ರಿಲೀಜಿಯನ್ಸ್** ಇದರ **ಸಹ-ಸ್ಥಾಪಕರೂ** ಅದರ **ರಾಜ್ಯಾಧ್ಯಕ್ಷರೂ** ಆಗಿದ್ದರು. ಅವರು **ನ್ಯಾಶನಲ್ ರಿಕೊನ್ಸಿಲಿಯೇಶನ್ ಕಮಿಶನ್‌ನ ಸದಸ್ಯರೂ** ಆಗಿದ್ದರು.

1974ರಲ್ಲಿ ಪಾಕಿಸ್ತಾನದಲ್ಲಿ ಅಹ್ಮದಿಯರು ಬಹಳ ಕಷ್ಟದಲ್ಲಿದ್ದಾಗ ವಹ್ಹಾಬ್ ಸಾಹೇಬರು ರಾತ್ರಿ ಹಗಲು ಲಂಡನ್ ಮಸ್ಜಿದ್ ಇಮಾಮರೊಂದಿಗೆ ಕೆಲಸ ಮಾಡಿ ಪತ್ರಿಕೆಗಳಿಗೆ ಮತ್ತು ಇತರ ಮಾಧ್ಯಮಗಳಿಗೆ ವರದಿಗಳನ್ನು ರವಾನಿಸುತ್ತಿದ್ದರು. ಅವರು ಲಂಡನಿನಲ್ಲಿ **"ಮುಸ್ಲಿಮ್ ಹೆರಾಲ್ಡ್"** ಪತ್ರಿಕೆಯ ಉಪಸಂಪಾದಕರಾಗಿ ಸಹ ಕಾರ್ಯನಿರ್ವಹಿಸಿದ್ದರು.

ಘಾನ ದೇಶದ ಉಪಾಧ್ಯಕ್ಷ ಅಮಿಸ್ಸ ಆರ್‌ಥರ್ ಹೀಗೆ ಹೇಳಿದರು:- "**ಅವರು ಬಹಳ ವೈಭವಶಾಲಿ ರಾಷ್ಟ್ರೀಯ ನಾಯಕರಾಗಿದ್ದರು. ಅವರನ್ನು ಎಂದೂ ಯಾರೂ ಮರೆಯುವಂತಿಲ್ಲ**". ಘಾನದ ಮಾಜಿ ಅಧ್ಯಕ್ಷ ಹೀಗೆ ಹೇಳಿದರು:- "**ಅವರು ಬಹಳ ದೊಡ್ಡ ಧಾರ್ಮಿಕ ಮತ್ತು ರಾಷ್ಟ್ರೀಯ ನಾಯಕರಾಗಿದ್ದಾರೆ**". ಡಾಕ್ಟರ್ ಮುಸ್ತಫಾ ಅಹ್ಮದ್ ಎಂಬ ಒಬ್ಬ ಮಂತ್ರಿ ಹೀಗೆಂದರು:- "**ಘಾನ ದೇಶ ಒಬ್ಬ ಶ್ರೇಷ್ಠ ಪುತ್ರನನ್ನು ಕಳೆದುಕೊಂಡಿದೆ. ಅವರನ್ನು ಯಾವಾಗಲೂ ನೆನಪಿಸಲಾಗುವುದು**". ಅಕ್ರದ ಆರ್ಚ್‌ಬಿಷಪ್ ಹೇಳಿದರು:- "**ಅವರು ಮಾನವ ಸೇವೆಯ ಧ್ವಜವಾಹಕರಾಗಿದ್ದರು**". ಮೆತೋಡಿಸ್ಟ್ ಚರ್ಚ್‌ನ ಬಿಷಪ್ ಹೇಳಿದರು:- "**ಒಬ್ಬ ಶಾಂತಿಪ್ರಿಯನು ದೇವಸನ್ನಿಧಿ ಸೇರಿದ್ದಾನೆ**". ಘಾನದ ಮುಸ್ಲಿಮ್ ಕಮಿಶನಿನ ಡೆಪ್ಯುಟಿ ಚೆಯರ್‌ಮೇನ್ ಹೇಳಿದರು:- "**ಘಾನ ದೊಡ್ಡ ಸ್ತಂಭಗಳಲ್ಲೊಂದನ್ನು ಕಳೆದು ಕೊಂಡಿದೆ**".

**ವಹ್ಹಾಬ್ ಸಾಹೇಬರ ಪುತ್ರ** ಹೇಳುತ್ತಾರೆ: ವಹ್ಹಾಬ್ ಸಾಹೇಬರು ಖಿಲಾಫತ್‌ಗೆ ಅತ್ಯಂತ ವಿಧೇಯರಾಗಿದ್ದರು. ಚಿಕ್ಕಪುಟ್ಟ ವಿಷಯಗಳ ಬಗ್ಗೆ ಸಹ ಖಲೀಫರಿಗೆ ಬರೆಯುತ್ತಿದ್ದರು. ಒಂದು ವಾರದ ಹಿಂದೆ ಡಾಕ್ಟರ್, ವಹ್ಹಾಬ್ ಸಾಹೇಬರೊಂದಿಗೆ ಆಸ್ಪತ್ರೆಗೆ ದಾಖಲಾಗಲು ಹೇಳಿದಾಗ ಅವರು ಹೇಳಿದರು: **"ನಾನು ಮೊದಲು ಹುಝೂರರ ಅನುಮತಿ ಕೇಳುವೆ".** 1990ರಲ್ಲಿ ಅವರ **ಒಬ್ಬ ಪುತ್ರ ವಿದೇಶಕ್ಕೆ ಹೋದಾಗ** ಮನೆಯೊಂದಿಗೆ ಸಂಪರ್ಕ ಸಾಧಿಸಲು ಕಷ್ಟವಾಗುತ್ತದೆ ಎಂದು ದೂರಿದಾಗ ಅವರು ಹೇಳಿದರು:- **"ನಾನು ರಬ್ವದಿಂದ ಬರೆದ ಪತ್ರಗಳು ನನ್ನ ತಾಯಿಗೆ ತಲಪಲು ಆರು ತಿಂಗಳು ಬೇಕಾಗುತ್ತಿತ್ತು."**

ಅವರು ಬಹಳ ಕಷ್ಟಪಟ್ಟು ಕೆಲಸ ಮಾಡುವವರಾಗಿದ್ದರು. ಸುಬ್‌ಹ್ ನಮಾಝ್ ನಂತರ ಕೆಲಸ ಪ್ರಾರಂಭಿಸಿದರೆ ನಮಾಝ್ ಮತ್ತು ಊಟಕ್ಕೋಸ್ಕರ ಮಾತ್ರ ಕೆಲಸ ನಿಲ್ಲಿಸುತ್ತಿದ್ದರು. ಅವರು ಯಾವಾಗಲೂ ನನಗೆ ಉರ್ದು ಭಾಷೆಯಲ್ಲಿಯೇ ತನ್ನ ಕೈಯಕ್ಷರದಲ್ಲಿ ಬರೆಯುತ್ತಿದ್ದರು. ಅವರು ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದರು. ಅವರ ಆರೋಗ್ಯ ಕೆಟ್ಟು ಹೋದಾಗ ಸಹ ಅವರು ಹೇಳುತ್ತಿದ್ದರು:

ಈಗ ನನಗೆ ಆರೋಗ್ಯ ಸ್ವಲ್ಪ ಉತ್ತಮವಾದ ಹಾಗೆ ತೋರುತ್ತದೆ ಎಂದು. ಅವರಿಗೆ ತಮ್ಮ ರೋಗದ ಬಗ್ಗೆ ತಿಳಿದಿರಲಿಲ್ಲ ಎಂದು ಕೆಲವರು ಯೋಚಿಸಿದ್ದರು. ಆದರೆ ಅವರಿಗೆ ಅದರ ಬಗ್ಗೆ ತಿಳಿದಿತ್ತು. ಆದರೆ, ಅವರು ತಮ್ಮನ್ನು ದೇವಿಚ್ಛೆಗೆ ಅರ್ಪಿಸಿದ್ದರು. ಅವರು ಜರ್ಮನಿಗೆ ಹೋಗಿ ವೈದ್ಯಕೀಯ ಪರೀಕ್ಷೆ ನಡೆಸಿದಾಗ ತಮ್ಮ ರೋಗದ ಬಗ್ಗೆ ಅವರಿಗೆ ತಿಳಿಯಿತು. ಆಗ ಅವರು ಮುಗುಳು ನಗುತ್ತಾ ಹೇಳಿದರು: ನನಗೆ ದೇವನಲ್ಲಿ ವಿಶ್ವಾಸವಿದೆ. ನಾನು ಖಲೀಫರಿಗೆ ಪ್ರಾರ್ಥನೆಗೆ ಬರೆಯುವೆನು. ನನ್ನ ಮೃತ್ಯು ವಿಧಿಸಲ್ಪಟ್ಟಿದ್ದರೆ ನಾನು ಅದರ ಬಗ್ಗೆ ಸಮಾಧಾನದಿಂದಿರುವೆನು.

ವಹ್ಹಾಬ್ ಸಾಹೇಬರು ಅತಿಥಿ ಸತ್ಕಾರ ಪ್ರಿಯರಾಗಿದ್ದರು. **ಅವರು ತಾನೇ ಸ್ವತಃ ಅತಿಥಿಗಳಿಗೆ ಪಾನೀಯ ನೀಡುತ್ತಿದ್ದರು**. ಅವರು ಬಹಳ ದಯಾಳುವೂ ಆಗಿದ್ದರು. ಒಮ್ಮೆ ಒಬ್ಬ ವಿಧವೆ ಅವರಲ್ಲಿ ತನ್ನ ಜೀವನೋಪಾಯ ಕಂಡುಕೊಳ್ಳಲಿಕ್ಕಾಗಿ ಧನ ಸಹಾಯ ಯಾಚಿಸಿದಾಗ ಆಕೆಯ ಪರಿಚಯ ಅವರಿಗಿಲ್ಲವಾದರೂ ಅವಳಿಗೆ ಒಂದು ಚಿಕ್ಕ ವ್ಯಾಪಾರ ಪ್ರಾರಂಭಿಸಲು ಸಹಾಯ ಮಾಡಿದರು. ಮಕ್ಕಳೆಂದರೆ ಅವರಿಗೆ ತುಂಬಾ ಪ್ರೀತಿ. ಅವರು ಮಕ್ಕಳಿಗೆ ಚಾಕ್ಲೇಟುಗಳನ್ನೂ ಬೆಲೂನ್‌ಗಳನ್ನೂ ಹಂಚುತ್ತಿದ್ದರು. ಕೆಲವರಿಗೆ ವಹ್ಹಾಬ್ ಸಾಹೇಬರ ಬಗ್ಗೆ ತಪ್ಪು ಅಭಿಪ್ರಾಯಗಳಿದ್ದುವು. ಆದರೆ ವಹ್ಹಾಬ್ ಸಾಹೇಬರು ಹೇಳುತ್ತಿದ್ದರು: **"ನಾನು ಸ್ವತಃ ಕಷ್ಟ ಸಹಿಸಿಕೊಂಡು ಅನ್ಯರಿಗೋಸ್ಕರ ಸೇವೆ ಸಲ್ಲಿಸಿದ್ದೇನೆ"**. ಅವರು ಖಿಲಾಫತ್‌ಗೆ ಬಹಳ ವಿಧೇಯರಾಗಿದ್ದರು. ಅವರು ಪ್ರತಿಯೊಂದು ವಿಷಯದ ಬಗ್ಗೆ ಖಲೀಫರ ಸಲಹೆ ಕೇಳುತ್ತಿದ್ದರು. ಇತರರು ಸಹ ಹಾಗೆ ಮಾಡಬೇಕೆಂದು ಅವರು ಉಪದೇಶಿಸುತ್ತಿದ್ದರು.

ವಹ್ಹಾಬ್ ಸಾಹೇಬರು ಇತರರಿಗೆ ಒಂದು ಮಾದರಿ ಆಗಿದ್ದರು. ಮಾಲಿಯ ಅಮೀರ್ ಸಾಹೇಬ್ ಹೇಳುತ್ತಾರೆ: ನಾನು ಬುರ್ಕಿನಾ ಫಾಸೋದಲ್ಲಿದ್ದಾಗ ವಹ್ಹಾಬ್ ಸಾಹೇಬರು ಅಲ್ಲಿ ಒಂದು ಮಣ್ಣಿನ ಗೋಡೆಯ ಗುಡಿಸಲಿನಲ್ಲಿ ವಾಸಿಸುತ್ತಿದ್ದರೆಂದು ನನಗೆ ನೆನಪಿದೆ. **ಬುರ್ಕಿನಾ ಫಾಸೋದಲ್ಲಿ ವಹ್ಹಾಬ್ ಸಾಹೇಬರ ತಬ್ಲೀಗ್ ಮೂಲಕ 1980ರಲ್ಲಿ ಜಮಾಅತ್ ಸ್ಥಾಪಿತವಾಯಿತು**. ಬುರ್ಕಿನಾ ಫಾಸೋದಿಂದ ಸೈಕಲ್ ಸವಾರರು ಖಿಲಾಫತ್ ಜುಬಿಲಿ ಸಮಾರಂಭಕ್ಕೆ ಆಗಮಿಸಿದಾಗ **ವಹ್ಹಾಬ್ ಸಾಹೇಬರು ಇನ್ನೂರು–ಮುನ್ನೂರು ಮೈಲು ದೂರ ಪ್ರಯಾಣಿಸಿ** ಅವರನ್ನು ಅಲ್ಲಿ ಸ್ವಾಗತಿಸಿದ್ದರು.

ವಹ್ಹಾಬ್ ಸಾಹೇಬರೊಂದಿಗೆ ಹಜ್ಜ್ ನಿರ್ವಹಿಸುವ ಬಗ್ಗೆ ಪ್ರಶ್ನಿಸಿದಾಗ ತಾನು ಈಗಾಗಲೇ ಹಜ್ಜ್ ನಿರ್ವಹಿಸಿದ್ದೇನೆ ಎಂದು ಅವರು ಹೇಳುತ್ತಿದ್ದರು. ಅದನ್ನು ಅವರು ಹೀಗೆ ವಿವರಿಸಿದರು: ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸರ ಕಾಲದಲ್ಲಿ ವಹ್ಹಾಬ್ ಸಾಹೇಬರು ಹಜ್ಜ್‌ಗೆ ಹೋಗಲು ನಿರ್ಧರಿಸಿದಾಗ ಅವರಿಗೆ ವಿರೋಧದ ಕಾರಣದಿಂದ ಅನುಮತಿ ದೊರಕಲಿಲ್ಲ. ಅವರಿಗೆ ವಿಸಾ ನಿರಾಕರಿಸಲಾಗಿತ್ತು. ಆ ವಿಷಯ **ಖಲೀಫತುಲ್ ಮಸೀಹ್ ಸಾಲಿಸ್‌ರಿಗೆ** ತಿಳಿಸಿದಾಗ ಹಝ್ರತ್ ಖಲೀಫರು ಸ್ವಲ್ಪ ಹೊತ್ತು ಮೌನವನ್ನು ಅವಲಂಬಿಸಿ ಅನಂತರ ಹೇಳಿದರು:– **ಅಲ್ಲಾಹನು ನನಗೊಂದು ದರ್ಶನ ತೋರಿಸಿದನು. ಅದರಲ್ಲಿ ವಹ್ಹಾಬ್ ಸಾಹೇಬರು ಕಅಬಕ್ಕೆ ಪ್ರದಕ್ಷಿಣೆ ಮಾಡುತ್ತಿದ್ದಾರೆ. ಅವರೊಂದಿಗೆ ಎಪ್ಪತ್ತು ಸಾವಿರ ಹಾಜಿಗಳು ಪ್ರದಕ್ಷಿಣೆ ಮಾಡುತ್ತಿದ್ದಾರೆ.!**

ವಹ್ಹಾಬ್ ಸಾಹೇಬರು ಬಹಳ **ಸ್ಥಿರಚಿತ್ತತೆ ಹೊಂದಿದವರಾಗಿದ್ದರು**. ಅವರ ಅಳಿಯನನ್ನು ಕಳ್ಳರು ಅಮೇರಿಕದಲ್ಲಿ ಕೊಂದು ಹಾಕಿದ್ದರು. ಆ ದಿನ ಜಾಮಿಯದ ವಾರ್ಷಿಕ ಸಮಾರಂಭ ನಡೆಯುತ್ತಿತ್ತು. ಮೂವರು ಚಿಕ್ಕ ಮಕ್ಕಳನ್ನು ಹೊಂದಿದ್ದ ಅವರ ಪುತ್ರಿ ವಿಧವೆಯಾದ ಅತ್ಯಂತ ದುಃಖದ ಸಂಗತಿ ಅವರಿಗೆ ತಿಳಿದಾಗಲೂ ಅವರು ಸಹನೆಯಿಂದ ಮೂರು ನಾಲ್ಕು ಗಂಟೆ ಅಲ್ಲಿದ್ದು ಸಮಾರಂಭ ಮುಗಿದ ನಂತರ ಆ ದಾರುಣ ಸಮಾಚಾರವನ್ನು ಇತರರಿಗೆ ತಿಳಿಸಿದರು.

ರಶ್ಯದ ಒಬ್ಬ ಸ್ನೇಹಿತರು **ವಹ್ಹಾಬ್ ಸಾಹೇಬರ ಅತಿಥಿ ಸತ್ಕಾರದ ಬಗ್ಗೆ ಪ್ರಶಂಸಿಸುತ್ತಾರೆ**. ಅವರು 2008ರಲ್ಲಿ ಘಾನದ ಜಲ್ಸಕ್ಕೆ ಹೋಗಿದ್ದರು. ವಹ್ಹಾಬ್ ಸಾಹೇಬರು ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ತುಂಬಾ ಉಪಚರಿಸಿದರು. ಅವರ ಅತಿಥಿ ಸತ್ಕಾರವನ್ನು ಕಂಡು ಆ ರಶ್ಯನ್ ಸಹೋದರ ತನ್ನ ಪ್ರಯಾಣದ ದಣಿವನ್ನೇ ಮರೆತು ಬಿಟ್ಟರಂತೆ.

ವಹ್ಹಾಬ್ ಸಾಹೇಬರು **ಖಲೀಫರಿಗೆ ಪತ್ರ ಬರೆಯುವ ಶಿಷ್ಟಾಚಾರದ ಬಗ್ಗೆ ಜನರಿಗೆ ಕಲಿಸುತ್ತಿದ್ದರು.** ಅವರು ಹೇಳುತ್ತಿದ್ದರು: **"ತಪ್ಪುಗಳನ್ನು ತಿದ್ದಿ ಪತ್ರ ಬರೆಯಬೇಡಿರಿ ಅದು ಖಲೀಫರಿಗೆ ಅಗೌರವ ತೋರಿಸಿದಂತಾಗುತ್ತದೆ. ತಿದ್ದಿದ ಪತ್ರವನ್ನು ಖಲೀಫರಿಗೆ ಕಳುಹಿಸಬಾರದು. ಅದರ ಬದಲು ಪೂರ್ತಿ ಪತ್ರವನ್ನೇ ಬೇರೆ ಬರೆಯಬೇಕು."** ಅವರು ಕೈಗೆತ್ತಿಕೊಂಡ ಕೆಲಸ ಮಾಡಿ ಮುಗಿಸದೆ ವಿಶ್ರಾಂತಿ ಪಡೆಯುತ್ತಿರಲಿಲ್ಲ. ಒಮ್ಮೆ ಅವರು ಜಮಾಅತಿನ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಇನ್ನೂರು ಮುನ್ನೂರು ಕಿಲೋಮೀಟರ್ ಕೆಟ್ಟ ಮಣ್ಣು ರೋಡಿನಲ್ಲಿ ಸಂಚರಿಸಿ ಸ್ಥಳಕ್ಕೆ ತಲಪಿದಾಗ ಕಾರ್ಯಕ್ರಮ ಮುಂದೂಡಲಾಗಿದೆ ಎಂದು ತಿಳಿಸಲಾಯಿತು. ಆ ಬಗ್ಗೆ ಅವರಿಗೆ ಕಳುಹಿಸಿದ ಟೆಲಿಗ್ರಾಮ್ ಅವರಿಗೆ ತಲಪಿರಲಿಲ್ಲ. **ಆದರೂ ಅವರು ಅತೃಪ್ತಿ ಸೂಚಿಸಲಿಲ್ಲ**.

ರಶ್ಯನ್ ಡೆಸ್ಕ್ ಇನ್‌ಚಾರ್ಜ್ ಖಾಲಿದ್ ಸಾಹೇಬ್ ಹೇಳುತ್ತಾರೆ: ವಹ್ಹಾಬ್ ಸಾಹೇಬರು ನನ್ನೊಂದಿಗೆ ಹೇಳಿದರು. ರಶ್ಯದಲ್ಲಿ ಅಹ್ಮದಿಯಾ ಜಮಾಅತ್ ಹರಡುವುದಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ತಿಳಿಸಿರುವನು. ನೀವು ಅದರ ಒಂದು ಭಾಗವಾಗಿರುವ ಕಾರಣ ತುಂಬಾ ಅದೃಷ್ಟಶಾಲಿಗಳಾಗಿದ್ದೀರಿ.

ಒಮ್ಮೆ ಘಾನದ ಒಂದು ಪ್ರಸಿದ್ಧ ಪತ್ರಿಕೆಯಲ್ಲಿ ವಹ್ಹಾಬ್ ಸಾಹೇಬರ ಭಾವಚಿತ್ರ ಪ್ರಕಟಿಸಿ ಹೀಗೆ ಬರೆಯಲಾಗಿತ್ತು. **ಚುನಾವಣೆಗೆ ಮೊದಲು ಘಾನದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಅವರು ಮಾಡಿದ ಅಮೂಲ್ಯ ಸೇವೆಗೋಸ್ಕರ ಅವರನ್ನು ಸಮ್ಮಾನಿಸಲಾಗುತ್ತದೆ** ಎಂದು. ಯು.ಎಸ್.ಎ. ಮುಬಲ್ಲಿಗ್ ಶಂಶಾದ್ ಸಾಹೇಬರು ಬರೆಯುತ್ತಾರೆ: ನಾನು ಘಾನದಲ್ಲಿ ಮುಬಲ್ಲಿಗ್ ಆಗಿದ್ದಾಗ ನನ್ನನ್ನು ಸಿರಾ ಲಿಯೋನಿಗೆ ವರ್ಗಾವಣೆ ಮಾಡಲಾಯಿತು. ಇದನ್ನು ರದ್ದುಗೊಳಿಸಲು ಸಹಾಯಮಾಡಬೇಕೆಂದು ಅಲ್ಲಿನ ಅಮೀರ್ ಸಾಹೇಬರು ವಹ್ಹಾಬ್ ಸಾಹೇಬರೊಂದಿಗೆ ಹೇಳಿದಾಗ ಅವರು ಜಮಾಅತಿನ ಆಡಳಿತ ವ್ಯವಸ್ಥೆಯ ಬಗ್ಗೆ ವಿವರಿಸುತ್ತಾ ಹೇಳಿದರು:– **ನಮ್ಮ ಜಮಾಅತಿನ ವ್ಯವಸ್ಥೆಯಲ್ಲಿ ಖಲೀಫರಿಗೆ ಅಗ್ರಸ್ಥಾನವಿದೆ ನಮ್ಮ ಜಮಾಅತ್ ಲೋಕದಾದ್ಯಂತ ಹರಡಬೇಕೆಂದು ಅವರು ಇಚ್ಛಿಸುತ್ತಾರೆ. ಯಾರನ್ನು ಎಲ್ಲಿ ನೇಮಿಸಬೇಕೆಂದು ಖಲೀಫರಿಗೆ ತಿಳಿದಿದೆ. ಆದುದರಿಂದ ಶಂಶಾದರನ್ನು ವರ್ಗಾಯಿಸಲಾಗಿದೆ.**

ಲಂಡನ್ ಮಸ್‌ಜಿದ್ ಇಮಾಮ್ ಅತಾಉಲ್ ಮುಜೀಬ್ ರಾಶಿದ್ ಸಾಹೇಬರು ಬರೆಯುತ್ತಾರೆ: **ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಒಮ್ಮೆ ರಬ್ವದಿಂದ ಇಸ್ಲಾಮಾಬಾದ್‌ಗೆ ಹೋದಾಗ ವಹ್ಹಾಬ್ ಸಾಹೇಬರನ್ನು ರಬ್ವದ ಅಮೀರ್ ಮಖಾಮಿ ಆಗಿ ನೇಮಿಸಿ ಮೌಲಾನ ಅಬುಲ್ ಅತಾ ಸಾಹೇಬರನ್ನು ನಾಯಿಬ್ ಅಮೀರ್ ಆಗಿ ನೇಮಿಸಿದ್ದರು**. ವಹ್ಹಾಬ್ ಸಾಹೇಬರು ಘಾನದ ಅಹ್ಮದಿಯರ ಹೃದಯಗಳಲ್ಲಿ ಖಿಲಾಫತ್ ಬಗ್ಗೆ ನಿಷ್ಠೆಯನ್ನು ತುಂಬಿಸಿದ್ದರು.

ವಹ್ಹಾಬ್ ಸಾಹೇಬರು ಇತ್ತೀಚೆಗೆ ಲಂಡನ್‌ಗೆ ಬಂದಾಗ ಘಾನದ ಜಲ್ಸಸಾಲಾನ ನಡೆಸುವ ಬಗ್ಗೆ ಅಲ್ಲಿನ ಅಹ್ಮದಿಯರು ನಿರಾಸಕ್ತರಾದುದು ನನ್ನ ಗಮನಕ್ಕೆ ಬಂದಾಗ ನಾನು ವಹ್ಹಾಬ್ ಸಾಹೇಬರೊಂದಿಗೆ ಆ ವಿಷಯ ಪ್ರಸ್ತಾಪಿಸಿದೆ. ವಹ್ಹಾಬ್ ಸಾಹೇಬರಿಗೆ ದುಃಖವಾಗಿ ಅವರು ಘಾನದ ಜಮಾಅತಿಗೆ ತಮ್ಮ ಅತೃಪ್ತಿ ಸೂಚಿಸಿದರು. **ಅವರು ಘಾನಕ್ಕೆ ಮರಳಿದಾಗ ಅಲ್ಲಿನ ನೇಶನಲ್ ಆಮಿಲ ಕ್ಷಮೆ ಕೇಳುವ ಪತ್ರ ನನಗೆ ಬರೆಯಿತು. ಅನಂತರ ಅಲ್ಲಿ ಜಲ್ಸ ಸಾಲಾನ ವಿಜೃಂಭಣೆಯಿಂದ ನಡೆಯಿತು.**

ಒಮ್ಮೆ ವಹ್ಹಾಬ್ ಸಾಹೇಬರು ರಜೆಯಲ್ಲಿದ್ದರು. ಆಗ ಖಲೀಫತುಲ್ ಮಸೀಹ್ ಸಾಲಿಸ್ ಹೇಳಿದರು– **ನಿಮಗೆ ರಜೆ ಇಲ್ಲ ನೀವು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಿರಿ** ಎಂದು. ವಹ್ಹಾಬ್ ಸಾಹೇಬರು ಹೇಳುತ್ತಿದ್ದರು: **ನನಗೆ ಈ ಅನುಭವದಿಂದ ದೊರೆತ ಲಾಭವು ಖಲೀಫರ ತೀರ್ಮಾನಗಳ ಹಿಂದೆ ಇರುವ ಬುದ್ಧಿ ವೈಭವವನ್ನು ತಿಳಿಯುವಂತೆ ಮಾಡಿತು.**

ವಹ್ಹಾಬ್ ಸಾಹೇಬರು ಲಂಡನ್‌ನಲ್ಲಿದ್ದಾಗ ಒಮ್ಮೆ ಅವರ ಟೆಲಿವಿಶನ್ ಕೆಟ್ಟು ಹೋಯಿತು. ಘಾನಕ್ಕೆ ಸಂಬಂಧಿಸಿದ ಒಂದು ವರದಿಯನ್ನು ಟೆಲಿವಿಶನ್ ನೋಡಿ ಖಲೀಫರಿಗೆ ವರದಿ ಮಾಡಲಿಕ್ಕಿತ್ತು. ಅವರು ಸಲೀಮ್ ಹಖ್ ಸಾಹೇಬರೊಂದಿಗೆ ಟೆಲಿವಿಶನ್ ರಿಪೇರಿ ಮಾಡಲು ಹೇಳಿದರು. ಸಲೀಮ್ ಸಾಹೇಬರು ಹೇಳಿದರು: **"ನನಗೆ ರಿಪೇರಿ ಮಾಡಲು ತಿಳಿದಿಲ್ಲ. ಆದರೆ ನನ್ನ ಮಕ್ಕಳು ರಿಪೇರಿ ಮಾಡುವರು".** ಮಕ್ಕಳು ಟೆಲಿವಿಶನ್ ಸರಿಪಡಿಸಿದಾಗ ವಹ್ಹಾಬ್ ಸಾಹೇಬರು ಸಂತೋಷಗೊಂಡು ಮಕ್ಕಳಿಗೆ ಚಾಕಲೇಟು ಕೊಟ್ಟು ಹೇಳಿದರು: **"ಈ ಮಕ್ಕಳು ವಾಗ್ದತ್ತ ಮಸೀಹರ ಸೈನಿಕರಾಗಿದ್ದಾರೆ. ಇವರ ಮೂಲಕ ಜಮಾಅತ್ ಪ್ರಗತಿ ಗಳಿಸುವುದು."**

ಹಿಂದೆ ನಾನು ಘಾನದಲ್ಲಿ ಇದ್ದಾಗ ವಹ್ಹಾಬ್ ಸಾಹೇಬರ ಮನೆಯಲ್ಲೂ ತಂಗಿದ್ದೆ. ಅವರು ಪಾಕಿಸ್ತಾನಿ ಅತಿಥಿಗಳೆಲ್ಲರಿಗೂ ಪಾಕಿಸ್ತಾನದ ಆಹಾರ ಪದಾರ್ಥಗಳನ್ನು ನೀಡಲು ಪ್ರಯತ್ನಿಸುತ್ತಿದ್ದರು. **ಅವರು ನಫ್ಲ್ ನಮಾಝ್‌ಗಳನ್ನು ತಹಜ್ಜುದ್ ನಮಾಝನ್ನೂ ತಪ್ಪದೆ ಅನುಷ್ಠಿಸುತ್ತಿದ್ದರು**. ಒಮ್ಮೆ ದೀರ್ಘ ದೂರ ಪ್ರಯಾಣ ಮಾಡಿ ಬಂದು ರಾತ್ರಿ 11:30 ಗಂಟೆಗೆ ಊಟಮಾಡಿ ಮಲಗಿದ್ದೆವು. ರಾತ್ರಿ 1:30 ಗಂಟೆಗೆ ನನಗೆ ಎಚ್ಚರವಾದಾಗ ಅವರು ತಹಜ್ಜುದ್ ನಮಾಝ್ ಮಾಡುವುದನ್ನು ಕಂಡೆನು. ಅವರು ಬಹಳ ಸ್ವಲ್ಪ ಕಾಲ ಮಾತ್ರ ನಿದ್ರಿಸಿರಬಹುದು.

ಒಮ್ಮೆ ಒಬ್ಬ ಮಿಶನರಿ ಅಹ್ಮದಿಯೇತರರ ಮುಂದೆ ಗೌರವರಹಿತವಾಗಿ ವಹ್ಹಾಬ್ ಸಾಹೇಬರೊಂದಿಗೆ ಮಾತನಾಡಿದಾಗ ಆ ವ್ಯಕ್ತಿಯೊಂದಿಗೆ ಉರ್ದುವಿನಲ್ಲಿ ಇಷ್ಟು ಮಾತ್ರ ಹೇಳಿದರು: **"ಅನ್ಯರ ಮುಂದೆ ಈರೀತಿ ಮಾತನಾಡಬೇಡ." ವಹ್ಹಾಬ್ ಸಾಹೇಬರಿಗೆ ಜಮಾಅತಿನ ಗೌರವ ಮಾತ್ರ ದೃಷ್ಟಿಯಲ್ಲಿತ್ತು**. ಕೆಲವು ಸಮಯದ ಬಳಿಕ ಆ ಮಿಶನರಿಯನ್ನು ರಬ್ವಕ್ಕೆ ಕಳುಹಿಸಲಾಯಿತು ಮತ್ತು ಅವರ ವಕ್ಫ್ ರದ್ದುಗೊಳಿಸಲಾಯಿತು.

ವಹ್ಹಾಬ್ ಸಾಹೇಬರಿಗೆ ಲೌಕಿಕ ದುರಾಸೆಗಳಿರಲಿಲ್ಲ. ಹಿಂದೆ ಜಮಾಅತ್ ವತಿಯಿಂದ ಅಹ್ಮದಿಯಾ ಕಾರ್ಯಕರ್ತರಿಗೆ ಕಡಿಮೆ ಬೆಲೆ ನಿಶ್ಚಯಿಸಿ ನಿವೇಶನಗಳನ್ನು ನೀಡಲಾಗಿತ್ತು. ವಹ್ಹಾಬ್ ಸಾಹೇಬರು ತನ್ನ ನಿವೇಶನವನ್ನು ಜಮಾಅತಿಗೆ ಕೊಡಲು ಇಚ್ಛಿಸಿದರು. ಪ್ರಾಯಶಃ ಅವರ ಚಿಕಿತ್ಸೆಗೆ ಜಮಾಅತ್ ಹಣ ಖರ್ಚು ಮಾಡುತ್ತಿರುವುದರಿಂದ ಹೀಗೆ ಮಾಡಲು ಅವರು ಬಯಸಿರಬಹುದು. 2.5 ಲಕ್ಷ ರೂಪಾಯಿ ಬೆಲೆಬಾಳುವ ನಿವೇಶನವನ್ನು ಅವರು ಜಮಾಅತಿಗೆ ಮರಳಿಸಿದರು.

ವಹ್ಹಾಬ್ ಸಾಹಿಬ್ ನಿಧನ ಹೊಂದಿದಾಗ **ಘಾನದ ಸರಕಾರ ಬಹಳ ಗೌರವ ನೀಡಿತು. ಸಕಲ ಸರಕಾರಿ ಗೌರವದೊಂದಿಗೆ ಅವರನ್ನು ದಫನ್ ಮಾಡಲಾಯಿತು. ದೇಶದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮಂತ್ರಿಗಳು ಗೌರವ ಸಲ್ಲಿಸಿದರು**. ಘಾನದಲ್ಲಿ **ಮೂಸಿಗಳನ್ನು ದಫನ ಮಾಡುವ ಖಬರಸ್ತಾನದಲ್ಲಿ** ವಹ್ಹಾಬ್ ಸಾಹೇಬರನ್ನು ಗೌರವಾದರಗಳೊಂದಿಗೆ ದಫನಮಾಡಲಾಯಿತು. **ಘಾನದ ಟಿ.ವಿ ಚಾನೆಲ್** ದಫನ್ ಬಗ್ಗೆ ವರದಿ ಬಿತ್ತರಿಸಿತು.

ವಹ್ಹಾಬ್ ಸಾಹೇಬ್ **ಪತ್ನಿಯನ್ನೂ ನಾಲ್ವರು ಪುತ್ರರನ್ನೂ ಮೂವರು ಪುತ್ರಿಯರನ್ನೂ** ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರೆಲ್ಲರನ್ನೂ ರಕ್ಷಿಸಲಿ ಮತ್ತು ಖಿಲಾಫತ್‌ನೊಂದಿಗೆ ಅವರ ಸಂಬಂಧವನ್ನು ಬಲಪಡಿಸಲಿ ಮತ್ತು ಅವರಿಗೆ ಸಹನೆಯನ್ನು ದಯಪಾಲಿಸಲಿ. **ಅಲ್ಲಾಹನು ಸ್ವರ್ಗದಲ್ಲಿ ವಹ್ಹಾಬ್ ಸಾಹೇಬರ ಪದವಿಯನ್ನು ಉನ್ನತಗೊಳಿಸಲಿ ಮತ್ತು ತನ್ನ ಪ್ರೀತಿಗೆ ಪಾತ್ರರಾದವರೊಂದಿಗೆ ಸ್ಥಾನ ದಯಪಾಲಿಸಲಿ– ಆಮೀನ್**.

ಹುಝೂರ್ ಕೊನೆಗೆ ಹೇಳಿದರು: ಜುಮುಅದ ನಂತರ ವಹ್ಹಾಬ್ ಸಾಹೇಬರ ಜನಾಝ ನಮಾಝ್ ನಿರ್ವಹಿಸುವೆನು.

––––––––––––––*****––––––––––––––

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 27-06-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By: **Kannada Khutuba Desk*** (comes under the **Kannada Isha'at Team**)

*Ahmadiyya Muslim Jama`at, Karnataka*

*Email*: **khutuba.kannada@gmail.com**